(2)

**<u>ವಿಧಾನಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 330ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಹೇಳಿಕೆ</u>**

| | |
|---|---|
| **ವಿಷಯ:** | ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ ನೌಕರರಿಗೆ ಶ್ರೀ ಥಾಮಸ್ ನೇತೃತ್ವದ ವರದಿಯಲ್ಲಿನ ಶಿಫಾರಸ್ಸನ್ನು ಸಚಿವ ಸಂಪುಟದಲ್ಲಿ ಒಪ್ಪಿಕೊಂಡು ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡಿರುವಂತೆ ಶೇಕಡಾ 100ರಷ್ಟು ವೇತನಾನುದಾನ, ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು, ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು (ಅನುದಾನ ಸಂಹಿತೆ) ನೀಡಲು ಡಿಸೆಂಬರ್ 2014ರಲ್ಲಿ ಜಾರಿಗೊಳಿಸಲು ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಈ ಸಂಬಂಧ ಸೇವಾ ನಿಯಮಗಳನ್ನು ರೂಪಿಸುತ್ತಿರುವುದಾಗಿ ಕೌಶಲ್ಯಾಭಿವೃದ್ಧಿ ಇಲಾಖೆಯು ಕಳೆದ 8 ವರ್ಷಗಳಿಂದ ಉತ್ತರ ನೀಡುತ್ತಿದ್ದು, ಇದುವರೆವಿಗೂ ಸೇವಾ ನಿಯಮಗಳನ್ನು ರೂಪಿಸದೇ ಇರುವುದರಿಂದ ಸದರಿ ಸಂಸ್ಥೆಗಳ ಹಲವಾರು ನೌಕರರು ಯಾವುದೇ ಸೌಲಭ್ಯವಿಲ್ಲದೆ ಮರಣ ಹೊಂದುತ್ತಿದ್ದು ಹಾಗೂ ನಿವೃತ್ತಿಯಾಗುತ್ತಿದ್ದಾರೆ. ಕಳೆದ 9 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ ನೌಕರರಿಗೆ ಶ್ರೀ ಥಾಮಸ್‌ರವರ ವರದಿಯ ಶಿಫಾರಸ್ಸುಗಳನ್ನು ಇತರೆ ಅನುದಾನಿತ ನೌಕರರುಗಳಿಗೆ ನೀಡಿರುವಂತೆ ಎಲ್ಲಾ ಸೌಲಭ್ಯಗಳನ್ನು ಜಾರಿಗೊಳಿಸಿ ಇದುವರೆವಿಗೂ ಆದೇಶ ಹೊರಡಿಸದೆ ಇರುವ ವಿಷಯವನ್ನು ನಿಯಮ 330ರಲ್ಲಿ ಮಾನ್ಯ ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ. |

ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಅನುದಾನ ಮತ್ತು ಸೇವಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ "The Karnataka Technical Educational Institutions (Grant-in-aid for Private Industrial Training Institutes) Rules 2023" ಅನ್ನು ದಿನಾಂಕ: 31.01.2023ರ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು, ಬಾದಿತರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಸ್ವೀಕೃತವಾದ ಆಕ್ಷೇಪಣೆ / ಸಲಹೆಗಳ ಕುರಿತು ಪರಿಶೀಲಿಸಲಾಗುತ್ತಿದೆ.

**ಕೌಉಜೀಇ 22 ಕೈತಪ್ರ 2024**

(ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.